ಓ.ಎಸ್ಃ 474 /2017

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 23.09.2019 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ</u>**

ನನ್ನ ಯಜಮಾನರು ಬದುಕಿದ್ದಾಗ ನಾನು ಅವರೊಂದಿಗೆ ವಾಸವಿದ್ದೆ. ನಾನು ಎಲ್ಲಾ ದಾಖಲಾತಿಗಳಲ್ಲಿ ನನ್ನ ಗಂಡನ ಹೆಸರು ಹಾಗೂ ನನ್ನ ತಂದೆಯ ಹೆಸರನ್ನು ಕೊಡುತ್ತೇನೆ. ಪ್ರಸ್ತುತ ದಾವೆಯಲ್ಲಿ ನಾನು ನನ್ನ ಗಂಡನ ಹೆಸರನ್ನು ತೋರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ಗಂಡನ ಹೆಸರು ನಮೂದಿಸಿದ್ದೇನೆ ಎನ್ನುತ್ತಾರೆ. ಹೆಣ್ಣು ಮಕ್ಕಳು ಮದುವೆಯ ಪೂರ್ವದಲ್ಲಿ ತಂದೆಯ ಹೆಸರು , ಮದುವೆಯ ನಂತರದಲ್ಲಿ ಗಂಡನ ಹೆಸರು ನೀಡುತ್ತಾರೆ ಎಂದರೆ ಸರಿ . ನನ್ನ ವಾದ ಪತ್ರದಲ್ಲಿ ಗಂಡನ ಹೆಸರು ಕೊಡಬೇಕಾಗಿತ್ತು ತಂದೆಯ ಹೆಸರನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ತಂದೆಯ ಹೆಸರು ನಮೂದಿಸಿದ್ದೇನೆ ಎನ್ನುತ್ತಾರೆ. ವಾದ ಪತ್ರದಲ್ಲಿ ತಂದೆ ಹಾಗೂ ಗಂಡನ ಹೆಸರು ನಮೂದಿಸಬೇಕು ಎಂದರೆ ಸರಿ .

ನನ್ನ ಗಂಡ ಪತ್ರ ಬರಹಗಾರ . ನನ್ನ ಗಂಡ ಸುಮಾರು 10 ವರ್ಷಗಳಿಂದ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ತನ್ನ ಕೊನೆಯ ಕಾಲದಲ್ಲೂ ಕೂಡಾ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ತೀರಿಕೊಂಡು 6 ವರ್ಷಗಳಾಯಿತು.

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಿಪಿ 1 ರ ಆನ್ ಡಿಮ್ಯಾಂಡ್ ಪ್ರೊನೋಟ್ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ . ಅದನ್ನು ಪತ್ರಗಾರರು ಕೈಯಿಂದಲೇ ಬರೆಯುತ್ತಾರೆ ಎಂದರೆ ಸರಿ . ನಿಪಿ 1 ಅನ್ನು ನಟರಾಜು ಎಂಬುವವರು ಬರೆದಿರುತ್ತಾರೆ. ನಿಪಿ 1 ಅನ್ನು ಬರೆದುಕೊಟ್ಟು ಈಗ 5 ವರ್ಷವಾಗಿದೆ. ದಿನಾಂಕ , ವರ್ಷ ತಿಂಗಳು ನನಗೆ ನೆನಪಿಲ್ಲ. ನಿಪಿ 1 ಅನ್ನು ಬರೆಯುವಾಗ ಪ್ರಸಾದ್ ಹಾಗೂ ಜಗದೀಶ್ ಎಂಬುವವರು ಸಾಕ್ಷಿದಾರರಾಗಿ ಹಾಜರಿದ್ದರು. ನಿಪಿ 1 ಅನ್ನು ಪತ್ರಬರಹಗಾರರ ಕಚೇರಿಯಲ್ಲಿ ಬರೆದಿರುತ್ತಾರೆ. ಅವರ ಕಚೇರಿ ಸಬ್ ರಿಜಿಸ್ಟರ್ ಕಚೇರಿಯ ಪಕ್ಕದಲ್ಲಿ ಇದೆ. ಅದನ್ನು ಸುಮಾರು 12 ಗಂಟೆಗೆ ಬರೆದಿರುತ್ತಾರೆ. ನಿಪಿ 1 ಅನ್ನು ಬೆರಳಚ್ಚು ಮಾಡಲಾಯಿತು. ನಿಪಿ 1 ಅನ್ನು ಬರೆಯಲು ಪತ್ರವನ್ನು ನಾನೇ ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಅನ್ನು ಬರೆಯಲು ತೆಗೆದುಕೊಂಡು ಬಂದ ಪತ್ರಕ್ಕೆ ಶುಲ್ಕವನ್ನು ಕಟ್ಟಬೇಕು ಎಂದರೆ ಸಾಕ್ಷಿಯು ಅದನ್ನು ಗೋಪಾಲ್ ರಾವ್ ರವರು ತೆಗೆದುಕೊಂಡು ಬಂದಿದ್ದರು ಎನ್ನುತ್ತಾರೆ. ನಿಪಿ 1 ರಲ್ಲಿರುವ ಒಕ್ಕಣೆಗಳನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಪತ್ರ ಬರಹಗಾರರೇ ಬರೆದಿರುತ್ತಾರೆ ಎನ್ನುತ್ತಾರೆ. ನಿಪಿ 1 ರಲ್ಲಿ ಗೋಪಾಲ್ ರಾವ್ ರವರು ಎರಡು ಕಡೆ ಸಹಿ ಮಾಡಿರುತ್ತಾರೆ. ಸಾಕ್ಷಿದಾರರು ಪತ್ರಕ್ಕೆ ಒಂದು ಕಡೆ ಸಹಿ ಮಾಡಿರುತ್ತಾರೆ. ಗೋಪಾಲ್ ರಾವ್ ರವರು ನನ್ನ ಗಂಡನಿಂದ 1 ಲಕ್ಷ ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನನ್ನ ಬಗ್ಗೆ ಯಾವುದೇ ವಿಚಾರ

ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ತಾನು ಪಡೆದ 1 ಲಕ್ಷ ಸಾಲದ ಹಣಕ್ಕೆ ರೂ. ಶೇಕಡಾ 5 ಬಡ್ಡಿಯನ್ನು ಕಟ್ಟುತ್ತಾ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಖಾಲಿ ಪತ್ರಕ್ಕೆ ಪ್ರತಿವಾದಿಯಿಂದ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಬರೆದಿರುವ ಒಕ್ಕಣೆಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯು ನಿಪಿ 1 ರಲ್ಲಿ ಹೇಳಿರುವಂತೆ ಯಾವುದೇ ಪ್ರತಿಪಲದ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರವೂ ಕೂಡಾ ಪ್ರತಿವಾದಿ ಬಡ್ಡಿ ಹಣವನ್ನು ನೀಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ಯಾವುದೇ ಹಣವನ್ನು ಪಡೆದಿಲ್ಲ ಬಡ್ಡಿ ನೀಡಿಲ್ಲ ಎನ್ನುತ್ತಾರೆ. ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ